ಸ್ಥಾವರದ ಕೆಳಭಾಗದಲ್ಲಿ ನೀರು ಕೆಳಗಡೆ ಹೋಗದಂತೆ ಒಂದು ಮಣ್ಣಿನ ಏರಿಯನ್ನು ಬುಲ್ಡೋಜರ್ ಸಹಾಯದಿಂದ ಹಾಕಲಾಗುತ್ತಿದೆ. ದಿನಾಂಕ ೩-೪-೮೫ರಿಂದ ಬಲೂತಿ ನೀರು ಸ್ಥಾವರದಿಂದ ದಿನಂಪ್ರತಿ ೧೨ ಲಕ್ಷ ಗ್ಯಾಲನ್ ನೀರನ್ನು ನಗರಕ್ಕೆ ಪಂಪು ಮಾಡಲಾಗುತ್ತಿದೆ. ಆದ್ದರಿಂದ ಕೊಯಿನ ಜಲಾಶಯದಿಂದ ನೀರು ತರುವ ಅಗತ್ಯವಿಲ್ಲ. ನಗರದ ರಾಫಿವೇಂದ್ರ ಕಾಲೋನಿ, ಸಂಗೊಳ್ಳಿರಾಯಣ್ಣ ಕಾಲೋನಿ, ಹುಡ್ಕೋ ಕಾಲೋನಿ, ಕೆ.ಇ.ಬಿ ಕಾಲೋನಿಗಳು ಎತ್ತರದ ಪ್ರದೇಶದಲ್ಲಿರುವುದರಿಂದ ಭೂತನಾಳ ಕೆರೆಯ ನೀರು ಇಲ್ಲಿಗೆ ತಲುಪುತ್ತಿಲ್ಲ. ಆದ್ದರಿಂದ ಆರು ಟ್ಯಾಂಕರ್‌ಗಳ ಮೂಲಕ ಸದರಿ ಕಾಲೋನಿಗಳಿಗೆ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಎರಡು ಟ್ಯಾಂಕರ್‌ಗಳನ್ನು ಮಂಡಲಿಯಿಂದ ನಗರಸಭೆಗೆ ಎರವಲು ಕೊಟ್ಟಿದೆ. ಇನ್ನೆರಡು ಟ್ಯಾಂಕರ್‌ಗಳನ್ನು ಕೊಡಲು ಭರವಸೆಯನ್ನು ಕೊಟ್ಟಿದೆ.

ಬಲೂತಿಯಿಂದ ನೀರನ್ನು ಪಂಪು ಮಾಡುತ್ತಿರುವುದರಿಂದ ಈ ಸಮಸ್ಯೆ ಬಹುಪಂಟ್ಟಿಗೆ ಪರಿಹಾರವಾಗಿದೆ. ಈ ಏರ್ಪಾಡಲ್ಲದೆ ನಗರದಲ್ಲಿ ಹಾಲಿ ೮೮ ಪಂಪುಗಳು ಕೆಲಸ ಮಾಡುತ್ತಿವೆ ಎಲ್ಲಾ ಪಂಪುಗಳು ಸುಸ್ಥಿತಿಯಲ್ಲಿರಲು ಮಂಡಲಿ ನಗರಸಭೆಗೆ ಸಹಾಯ ಮಾಡುತ್ತಿದೆ. ಏಳು ವಿದ್ಯುತ್‌ಚಾಲಿತ ಪಂಪುಗಳೂ ಕೂಡ ಕೊಳವೆ ಬಾವಿಗಳಿಂದ ನೀರನ್ನು ಸರಬರಾಜು ಮಾಡುತ್ತಿವೆ.

ಕ್ಷಾಮ ಪರಿಹಾರ ಕಾರ್ಯಕ್ರಮದಲ್ಲಿ ೧೯೮೩ ವಂತ್ತು ೮೪ರಲ್ಲಿ ೨೮ ಕೊಳವೆ ಬಾವಿಗಳನ್ನು ತೋಡಿದ್ದು ಇವುಗಳಲ್ಲಿ ೧೮ಕ್ಕೆ ಕೈಪಂಪುಗಳನ್ನು ಮತ್ತು ೩ಕ್ಕೆ ವಿದ್ಯುತ್ ಪಂಪ್‌ಗಳನ್ನು ಅಳವಡಿಸಿದ್ದು ನೀರು ಸರಬರಾಜು ಮಾಡಲಾತ್ತಿದೆ,

ಮೇಲ್ಕಂಡ ಎಲ್ಲಾ ಮೂಲಗಳಿಂದ ನಗರಕ್ಕೆ ದಿನಂಪ್ರತಿ ಮೂರು ದಶಲಕ್ಷ ಗ್ಯಾಲನ್ ನೀರು ಸರಬರಾಜಾಗುತ್ತದೆ. ಈಗ ಸುಮಾರು ದಿನಂಪ್ರತಿ ತಲಾ ಸರಾಸರಿ ೮೧ ಲೀಟರ್ ನೀರು ಸರಬರಾಜಾಗುತ್ತಿದೆ.

(iii) ಆಳಂದ್ ತಾಲ್ಲೂಕಿನ ಗ್ರಾಮಗಳಲ್ಲಿ ಅದರಲ್ಲಿಯೂ ಹರಿಜನರ ಕೇರಿಯಲ್ಲಿ ಕುಡಿಯಲಿವ ನೀರಿನ ಅಭಾವ

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್.—ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಅನೇಕ ಗ್ರಾಮದಲ್ಲಿ ಅದರಲ್ಲೂ ವಿಶೇಷವಾಗಿ ಹರಿಜನಕೇರಿ ಹಾಗೂ ತಾಂಡಾಗಳಲ್ಲಿ ಕುಡಿಯುವ ನೀರಿನ ತೊಂದರೆ ಹೆಚ್ಚಾಗಿದ್ದು ಸದರಿ ನೀರಿನ ಬವಣೆಯನ್ನು ನಿವಾರಿಸಲು ಕೊಳವೇ ಬಾವಿಗಳನ್ನು ತೋಡಿಸುವುದು ಹಾಗೂ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಲು ಕೂಡಲೇ ಕ್ರಮ ಕೈಕೊಳ್ಳುವ ವಿಚಾರ.

ಶ್ರೀ ಎ. ಲಕ್ಷ್ಮೀಸಾಗರ್. —ಸನ್ಮಾನ್ಯ ಸದಸ್ಯರು ೩-೪ ದಿವಸಗಳಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ನಾನು ಅವರಿಗೆ ಸಂಪೂರ್ಣವಾದ ವಿವರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಅವರು ಕೇಳಿದ್ದುದು ಅರ್ಬನ್‌ದು ಅಲ್ಲ. ಅವರು ರೂರಲ್ ವಿಷಯ ಕೇಳುತ್ತಿದ್ದಾರೆ. ಹರಿಜನಕೇರಿ ಮತ್ತು ತಾಂಡಾಗಳದ್ದು ಅವರು ಕೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ ಖಾರ್ಗೆ,—ಅವರು ತಾಂಡಾಗಳ ವಿಷಯ ಕೇಳುತ್ತಿದ್ದಾರೆ. ಇವತ್ತು ಅನೇಕ ಕಡೆ ಇಂತಹ ಪರಿಸ್ಥಿತಿ ಇದೆ. ನನ್ನ ಜಿಲ್ಲೆಯಲ್ಲಿ ನೀರು ಇಲ್ಲ.

ಶ್ರೀ ಆರ್. ವೆಂಕರಾಮಯ್ಯ.—ಅಧ್ಯಕ್ಷರೆ, ನಮ್ಮ ....

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಮಗೆ ಇನ್ನೂ ಉತ್ತರ ಬಂದಿಲ್ಲವಲ್ಲ ಅಧ್ಯಕ್ಷರೇ, ಹಾಗೇ ಮುಂದಿನವರ ವಿಷಯಕ್ಕೆ ಹೋದರೆ ಹೇಗೆ ?

ಶ್ರೀ ಧರ್ಮಸಿಂಗ್.—ನಿಯಮ ೩೫೪ ರ ಕೆಳಗೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇದೆ, ಇವತ್ತು ಮಾನ್ಯ ಸದಸ್ಯರು ಗುಲ್ಬರ್ಗ ಜಿಲ್ಲೆಯ ಆಳಂದ್ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ನೀರಿನ ತೊಂದರೆ ಇರುವ ಬಗ್ಗೆ ಹೇಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಅವರೇ ಇಲ್ಲಿ ಇಲ್ಲದಿದ್ದ ಮೇಲೆ ಕೇಳತಕ್ಕದ್ದಕ್ಕೆ ಅರ್ಥವಿಲ್ಲದಿದ್ದಕ ಇದನ್ನು

ತೆಗೆದುಹಾಕಿ. ಬಡ ಜನರಿಗೆ ಸಂಬಂಧಪಟ್ಟ ಬಹಳ ಮಹತ್ವವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಲಕ್ಷ್ಮೀಸಾಗರ್ ಅವರು ಉತ್ತರ ಕೊಡುತ್ತಾರೆ. ಈ ಮಂತ್ರಿಗಳು ಆ ಖಾತೆಯ ವ್ಯವಹಾರಗಳನ್ನೂ ವಹಿಸಿಕೊಂಡಿದ್ದಾರೆಯೇ ? ಅದೇ ರೀತಿ ನಿಯಮ ೩೫ರ ಅಡಿಯಲ್ಲಿ ಪ್ರಸ್ತಾಪ ವಾಗಶಕ್ಯ ವಿಷಯಗಳಿಗೆ ವಿವರಗಳನ್ನು ನೀಡಲು ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿರಬೇಕು ಆದರೆ ಈಗ ಸಂಬಂಧಪಟ್ಟ ಮಂತ್ರಿಯವರು ಇಲ್ಲ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ನಿಯಮ ೩೫ರ ಕೆಳಗೆ ಕಳುಹಿಸಿರುವವರು ಬೇರೆ ಸದಸ್ಯರು, ನೀವಲ್ಲ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಧರ್ಮಸಿಂಗ್‌ರವರು ಹಿರಿಯ ಸದಸ್ಯರ ಹಾಗೂ ಹಿಂದೆ ಮಂತ್ರಿಗಳಾಗಿದ್ದರು, ಅವರಿಗೆ ನಿಯಮಗಳು ಚೆನ್ನಾಗಿ ಗೊತ್ತಿವೆ. ಆದರೂ ನಿಯಮ ೩೫ರ ಬೇಡ, ಪನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾನು ಏನು ಬೇಕಾದರೂ ಕೇಳಬಹುದು ಎಂದು ಅವರು ತಿಳಿದುಕೊಂಡಿರುವಂತಿದೆ.

ಶ್ರೀ ಧರ್ಮಸಿಂಗ್.—ನಾನು ಆರೀತಿ ತಿಳಿದುಕೊಂಡಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ತಾವು ಮಂತ್ರಿಗಳಾಗಿದ್ದಾಗ ನಾನು ಆಕಡೆ ಕುಳಿತಿದ್ದೆ. ತಾವು ಈ ಜಾಗದಲ್ಲಿ ಕುಳಿತಿದ್ದಿರಿ. ನಾನು ಅನೇಕ ಸಾರಿ ಪ್ರಶ್ನೆಗಳನ್ನು ಕೇಳಿದಾಗ ಇನ್ನೊಂದು ಸಾರಿ ಉತ್ತರ ಕೊಡುತ್ತೇನೆಂದು ತಾವೇ ಹೇಳಿದ್ದೀರಿ. ಇದು ಹೊಸದೇನೂ ಅಲ್ಲ. ಕೆಲವು ಸಾರಿ ಸರ್ಕಾರದಲ್ಲಿ ಪೂರ್ತಿ ಮಾಹಿತಿಗಳು ಇರುತ್ತವೆ, ಮತ್ತೆ ಕೆಲವು ಸಾರಿ ಇರುವುದಿಲ್ಲ. ಏಕೆಂದರೆ ದೂರದ ಊರುಗಳಿಂದ ಸಕಾಲಕ್ಕೆ ಉತ್ತರಗಳು ಬಂದು ನಮ್ಮ ಕೈ ಸೇರಿರುವುದಿಲ್ಲ. ಪರಿಪೂರ್ಣ ಮಾಹಿತಿ ಸರ್ಕಾರಕ್ಕೆ ಬರಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ. ಉದಾಹರಣೆಗೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ತಾವು ಮಾಹಿತಿಗಳನ್ನು ಕೇಳಿದರೂ ಕೂಡ ನಾನು ತಕ್ಷಣ ಒದಗಿಸಲು ಕಷ್ಟವಾಗುತ್ತದೆ. ಅದಕ್ಕೆ ಸೂಕ್ತ ಉತ್ತರವನ್ನು ನಾನು ಕೊಡಲು ಸಾಧ್ಯವಾಗುವುದಿಲ್ಲ. ಆದರೆ ನಿಮ್ಮ ಪ್ರಶ್ನೆಗೆ ನಾವು ಉತ್ತರವನ್ನೇ ಕೊಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ ಅದರ ವಿಚಾರ ಬೇರೆ. ಒಂದು ವೇಳೆ ಸದನದಲ್ಲಿ ಮಾನ್ಯ ಸದಸ್ಯರು ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡಲು ಸಾಧ್ಯವಾಗದಿದ್ದರೆ ಅಧಿವೇಶನ ಮುಂಗಿದ ಮೇಲಾದರೂ ಸದರೀ ಮಾಹಿತಿಗಳನ್ನು ಸಂಬಂಧಪಟ್ಟ ಶಾಸಕರಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಿದ್ದೇವೆ. ಏಕೆಂದರೆ, ಕಳೆದ ಸಾರಿ ಇದೇ ರೀತಿ ಕೆಲವು ಮಾನ್ಯ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಗಳನ್ನು ಒದಗಿಸಲು ಸಾಧ್ಯವಾಗದೇ ಇದ್ದಾಗ ಎಲ್ಲಾ ಸಚಿವರಿಗೂ ಪತ್ರಗಳನ್ನು ಬರೆದು ಸದಸ್ಯರ ಪ್ರಶ್ನೆ ಗಳಿಗೆ ಉತ್ತರಗಳನ್ನು ಕಳುಹಿಸುವಂತೆ ಹೇಳಿದ್ದೇನೆ. ನಾನು ಸಂಸದೀಯ ಮಂತ್ರಿಯಾಗಿ ಈರೀತಿ ಪತ್ರವನ್ನು ಬರೆದಿದ್ದೇನೆ. ಅದರ ಪ್ರಕಾರ ಅನೇಕ ಸಚಿವರು ಮಾನ್ಯ ಸದಸ್ಯರುಗಳಿಗೆ ಪತ್ರ ಮುಖೇನ ಉತ್ತರಗಳನ್ನು ಕಳುಹಿಸಿದ್ದಾರೆ.

ಶ್ರೀ ಧರ್ಮಸಿಂಗ್.—ಮಾನ್ಯ ಸದಸ್ಯರು ಏನಾದರೂ ಪ್ರಶ್ನೆಗಳನ್ನು ಕೇಳಿದಾಗ ಸಂಬಂಧಪಟ್ಟ ಮಂತ್ರಿಗಳು ಸದನದಲ್ಲಿ ಹಾಜರಿದ್ದು ಸೂಕ್ತ ಉತ್ತರಗಳನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ನಿಯಮ ೩೫ರ ಬಗ್ಗೆ ಎಲ್ಲಾ ಮಂತ್ರಿಗಳ ಪರವಾಗಿಯೂ ನಾನು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಎಲ್ಲಾ ಮಂತ್ರಿಗಳ ಪರವಾಗಿಯೂ ನಿಯಮ ೩೫ರ ಬಗ್ಗೆ ತಾವು ಜವಾಬ್ದಾರಿಯನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಸಚಿವರು ಹೇಳಿದ್ದಾರೆ.....

ಅಧ್ಯಕ್ಷರು.—ಅದರ ಅರ್ಥ ಯಾವ ಮಂತ್ರಿಗಳು ಬಂದಿರುವುದಿಲ್ಲ ಅಂಥ ಮಂತ್ರಿಗಳ ಪರವಾಗಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ ಎಂದು.

ಶ್ರೀ ಎಸ್. ಬಂಗಾರಪ್ಪ.—ಬಾರದೇ ಇರುವ ಮಂತ್ರಿಗಳ ಪರವಾಗಿ ಎಂದು ಅವರು ಹೇಳಲಿಲ್ಲ.

ಅಧ್ಯಕ್ಷರು.—ಎಂದರೆ ಅದರ ಅರ್ಥ ಬಾರದ ಮಂತ್ರಿಗಳ ಪರವಾಗಿ ಎಂದು.

ಶ್ರೀ ಎಸ್. ಬಂಗಾರಪ್ಪ.—ಮಂತ್ರಿಗಳಿಗೆ ಬೇರೆಬೇರೆ ಕೆಲಸಗಳು ಇರುತ್ತವೆ.....

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಇರತಕ್ಕ ಖಾತೆಗಳ ಪೈಕಿ ಅರ್ಧದಷ್ಟು ಖಾತೆಗಳನ್ನು ಮಾನ್ಯ ಗುಂಡೂರಾಯರೇ ವಹಿಸಿಕೊಂಡಿದ್ದರು. ದಿನ ಬೆಳಗಾದರೆ ಅವರು ಕಲ್ಕತ್ತಾ, ಡೆಲ್ಲಿ, ಬೊಂಬಾಯಿ, ಮುಂತಾದ ಕಡೆಗಳಿಗೆ ಹೋಗುತ್ತಲೇ ಇರುತ್ತಿದ್ದರು. ನಾವೇನಾದರೂ ಪ್ರಶ್ನೆಗಳನ್ನು ಕೇಳಿದರೆ ನನ್ನ ಪರವಾಗಿ ಅದಕ್ಕೆಲ್ಲಾ ಮಾನ್ಯ ಬಂಗಾರಪ್ಪನವರು ಉತ್ತರ ಕೊಡುತ್ತಾರೆಂದು ಹೇಳುತ್ತಿದ್ದರು ಆಗ ನಾನು ವಿರೋಧಪಕ್ಷದ ನಾಯಕನಾಗಿದ್ದೆ. ಪ್ರತಿದಿನ ಸದನ ಮುಂಗಿಯುವವರೆಗೂ ಇವತ್ತು ಉತ್ತರ ಕೊಡುತ್ತಾರೆ, ನಾಳೆ ಉತ್ತರ ಕೊಡುತ್ತಾರೆಂದು ಸಭಾಧ್ಯಕ್ಷರು ನಮಗೆ ಹೇಳುತ್ತಲೇ ಬರುತ್ತಿದ್ದರು. ಆದರೆ ನಮ್ಮ ಪ್ರಶ್ನೆಗಳಿಗೆ ಉತ್ತರಗಳೇ ಬರಲಿಲ್ಲ. ಹಿಂದೆ ನೀವು ಇದೇ ಸ್ಥಾನದಲ್ಲಿ ಕುಳಿತಿದ್ದಿರಿ. ತಮಗೂ ಗೊತ್ತಿದೆ, ಹಿಂದಿನ ಅಧ್ಯಕ್ಷರು ಯಾವ ರೀತಿ ಉತ್ತರಕೊಟ್ಟಿದ್ದಾರೆ. ಯಾವ ರೀತಿ ರೂಲಿಂಗ್ ಕೊಟ್ಟಿದ್ದಾರೆ ಆದೇ ರೀತಿ ಇವತ್ತು ನಾವು ನಡೆದುಕೊಳ್ಳುತ್ತೇವೆಂದು ಹೇಳಿದರೆ ತಮಗೆ ಕೋಪ ಬರುತ್ತದೆ. ಆದರೂ ಕೂಡ ನಿಯಮ ೩೫೪ಕ್ಕೆ ಸಂಬಂಧಪಟ್ಟಂತೆ ಉತ್ತರವನ್ನು ನೀಡಲು ಸದನಕ್ಕೆ ಬಾರದ ಮಂತ್ರಿಗಳ ಜವಾಬ್ದಾರಿಯನ್ನೆಲ್ಲಾ ನಾನು ತೆಗೆದುಕೊಳ್ಳುತ್ತೇನೆಂದು ಈಗಾಗಲೇ ಹೇಳಿದ್ದೇನೆ.....

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಹಿಂದೆ ಮಾನ್ಯ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ ಬೇರೆ ಕಡೆ ಹೋಗುವ ಸಂದರ್ಭಗಳಲ್ಲೆಲ್ಲಾ ಅಧ್ಯಕ್ಷರಿಗೆ ಪತ್ರವನ್ನ ಬರೆದು ಅನುಮತಿಯನ್ನು ತೆಗೆದುಕೊಂಡು ಹೋಗುತ್ತಿದ್ದರು. ಆದರೆ ಇವತ್ತು ನಿಮ್ಮ ಮಂತ್ರಿಗಳು ಎಷ್ಟು ಜನ ನಿಮಗೆ ಪತ್ರವನ್ನು ಬರೆದು ಅಪ್ಪಣೆಯನ್ನು ತೆಗೆದುಕೊಂಡು ಹೋಗಿದ್ದಾರೆಂಬುದನ್ನು ದಯವಿಟ್ಟು ತಿಳಿಸಿ...

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಡಿಮ್ಯಾಂಡ್ಸ್ ಫಾರ್ ಗ್ರ್ಯಾಂಟ್ಸ್...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲಾ ಮಾನ್ಯ ಸದಸ್ಯರೂ ಕುಳಿತುಕೊಳ್ಳಿ. ನಿಮ್ಮ ಕ್ಷೇತ್ರದ ಸಮಸ್ಯೆಗಳು ಏನಿವೆ ಅವುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸಾಕಿತು. ನಿಮಗೆ ಉತ್ತರ ಬರುತ್ತದೆ. ನಿಮಗೆ ಉತ್ತರ ಬಂದರೆ ಸಾಕು ತಾನೆ ?

(4) ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರ ಸೇವೆಯನ್ನು ಖಾಯಂಗೊಳಿಸುವುದು.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತರು ಸೇವೆ ಖಾಯಂ ಆಗದೆ, ಕಾರ್ಯಕರ್ತರು, ಸಹಾಯಕಿಯರು ಮಾಪೆಯಾನ ೧೭೫ ಮೆತ್ತು ೫೦ ರೂಪಾಯಿಗಳನ್ನು ಮಾತ್ರ ಪಡೆಯುತ್ತಿದ್ದು ಅವರ ಬದುಕು ತುಂಬಾ ಕಷ್ಟವಾಗಿದೆ. ಅವರು ಬಾಲಕಬಾಲಕಿಯರ ವಿಕಾಸ ರೂಪಿಸರಾದರೂ ಅವರನ್ನು ಇತರೇ ಸರ್ಕಾರೀ ನೌಕರರಂತೆ ಪರಿಗಣಿಸದೆ ತುಂಬಾ ತೊಂದರೆಗೆ ಸಿಕಿದ್ದು ಈ ಕಾರಣಮ್ಯದಿಂದಾಗಿ ಅವರು ತತ್ತರಿಸಿದ್ದಾರೆ. ಈ ಬಗ್ಗೆ ಅನೇಕ ತರಹ ಹೋರಾಟವನ್ನು ನಡೆಸಿದ್ದಾಗ್ಗೂ ಪ್ರಯೋಜನವಿಲ್ಲದೆ ಅವರು ಹೋರಾಟ ಮನೋಭಾವಕ್ಕೆ ಇಳಿದಿದ್ದಾರೆ. ಆದ್ದರಿಂದ ಸರ್ಕಾರದವರು ಈ ಬೇಡಿಕೆಯನ್ನು ಈಡೇರಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಮತ್ತು ಕಳೆದ ೫ ವರ್ಷಗಳಿಂದ ಅವರು ಕೆಲಸ ಮಾಡುತ್ತಿರುವುದರಿಂದ ಈ ಅವಧಿಗೆ ಏನು ಹಣವನ್ನು ಕೊಡಬೇಕೋ ಅದನ್ನೂ ಕಟ್ಟಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್,—(ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು).—ಸ್ವಾಮಿ, ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರಿಗೆ ಉತ್ತರವನ್ನು ಕಳುಹಿಸುವ ಜವಾಬ್ದಾರಿಯನ್ನು ನಾನು ತೆಗೆದುಕೊಳ್ಳುತ್ತೇನೆ. ಕಾರಣ ಇದಕ್ಕೆ ಸಂಬಂಧಪಟ್ಟ ಸಚಿವೆಯವರು ಈ ದಿವಸ ಇಲ್ಲಿಗೆ ಬಂದಿಲ್ಲ.